2275(2944) ಶ್ರೀ ಬಸವರಾಜು ಎ.ಎಸ್. (ಅರಸೀಕರೆ):- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆ, ಅರಸೀಕೆರೆಯಲ್ಲಿರುವ ಸಾರಿಗೆ ಡಿಪೋ ಘಟಕವು ಈ ಹಿಂದೆ ಹಾಸನ ವಿಭಾಗಕ್ಕೆ ಸೇರಿದ್ದು ನಿಜವೇ;

ಆ) ಹಾಗಿದ್ದಲ್ಲಿ ಇದನ್ನು ಹಾಸನದಿಂದ ಚಿಕ್ಕಮಂಗಳೂರಿಗೆ ಬದಲಾವಣೆ ಮಾಡಲು ಕಾರಣಗಳೇನು;

ಇ) ತಾಂತ್ರಿಕವಾಗಿ, ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಅರಸೀಕೆರೆ ಹಾಸನಕ್ಕೆ ಹತ್ತಿರವಿರುವ ಕಾರಣ ಇದನ್ನು ಪುನ: ಹಾಸನ ವಿಭಾಗಕ್ಕೆ ಸೇರಿಸಲು ಸರ್ಕಾರ ಪರಿಗಣಿಸುವುದೆ;

ಈ) ಈ ಬಗ್ಗೆ ಸರ್ಕಾರದ ಕ್ರಮಗಳೇನು;

ಉ) ಅರಸೀಕೆರೆ ಗ್ರಾಮಾಂತರ ಪ್ರದೇಶದಲ್ಲಿ ಕ್ರಮಿಸುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು ಹಾಗೂ ಸುತ್ತುವಳಿ ಮಾರ್ಗಗಳೆಷ್ಟು;

ಊ) ಕಳೆದ ಎರಡು ವರ್ಷಗಳಿಂದ ಈ ವರ್ಷ ಗ್ರಾಮಾಂತರದ ಎಷ್ಟು ಮಾರ್ಗದ ಸುತ್ತು ವಳಿಗಳನ್ನು ರದ್ದುಪಡಿಸಲಾಗಿದೆ;

ಋ) ಇದಕ್ಕೆ ಕಾರಣಗಳೇನು ಹಾಗೂ ಪುನ: ಯಾವಗ ಮಾರ್ಗದಲ್ಲಿ ಮತ್ತು ಸುತ್ತುವಳಿಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):-

ಅ) ಹೌದು.

ಆ) ಹಾಸನ ವಿಭಾಗದಲ್ಲಿ ಅನುಸೂಚಿಗಳ ಸಂಖ್ಯೆ ಹೆಚ್ಚಿದಂತೆ ವಿಭಾಗದ ಕಾರ್ಯಾಚರಣೆಯ ಮಟ್ಟವನ್ನು ಹಾಗೂ ಹತೋಟಿಯನ್ನು ಉತ್ತಮಪಡಿಸಬೇಕಾದ ಅಗತ್ಯತೆ ಮೇರೆಗೆ ಹಾಸನ ವಿಭಾಗವನ್ನು ಹಾಸನ ಮತ್ತು ಚಿಕ್ಕಮಗಳೂರು ವಿಭಾಗಗಳಾಗಿ ಇಬ್ಭಾಗಿಸಲಾಯಿತು. ಚಿಕ್ಕಮಗಳೂರು ವಿಭಾಗವನ್ನು ಆರ್ಥಿಕವಾಗಿ ಸದೃಢಗೊಳಿಸಲು ಅರಸೀಕೆರೆ ಘಟಕವನ್ನು ಚಿಕ್ಕಮಗಳೂರು ವಿಭಾಗಕ್ಕೆ ಸೇರಿಸಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) 64 ಬಸ್ಸುಗಳು, 398 ಸುತ್ತುವಳಿಗಳು.

ಊ) ಎರಡು

ಋ) ಸಾರಿಗೆ ಆದಾಯದ ಕೊರತೆ, ಸದ್ಯಕ್ಕೆ ಪ್ರಾರಂಭಿಸುವ ಪ್ರಸ್ತಾವನೆ ಇಲ್ಲ.

2276(2789) ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ):- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕಿನಲ್ಲಿ ಈವರೆಗೆ ಮಂಜೂರಾಗಿರುವ ಏತ ನೀರಾವರಿ ಯೋಜನೆಗಳಾವುವು;

ಆ) ಈ ಯೋಜನೆಗಳಿಗೆ ಎಷ್ಟು ಹಣ ವೆಚ್ಚ ಮಾಡಲಾಗಿದೆ;

ಇ) ಇನ್ನೂ ಎಷ್ಟು ಏತ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಗುರುತಿಸಲಾಗಿದೆ;

ಈ) ಮೊದಲೆ ಅಪೂರ್ಣಗೊಂಡಿರುವ ಕಾಮಗಾರಿಗಳೆಷ್ಟು (ವರ್ಷವಾರು ವಿವರ ನೀಡುವುದು);

ಉ) ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮಂತ್ರಿ ಸಾರಿಗೆ ಸಚಿವರು):–

ಅ) 3 ಏತ ನೀರಾವರಿ ಯೋಜನೆಗಳು. ವಿವರ ಈ ಕೆಳಕಂಡಂತಿವೆ:

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ಏತ ನೀರಾವರಿ ಯೋಜನೆ	ಮಾಡಲಾದ ವೆಚ್ಚ
1.	ಕರಿಗೋಡಗಿ	0.55
2.	ರುದ್ರಗುಪ್ಪೆ	0.27
3.	ಬಿ. ಶೆಟ್ಟಿಗೇರಿ	1.27

ಇ) ಯಾವುದೇ ಹೊಸ ಯೋಜನೆಗಳನ್ನು ಗುರುತಿಸಿರುವುದಿಲ್ಲ.

ಈ) ಯಾವುದೂ ಇರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

2277(3103) ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ (ಗುಲ್ಬರ್ಗ):–ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗಾ ಮಹಾನಗರದ ಹೃದಯ ಭಾಗದಲ್ಲಿರುವ ಬ್ರಹ್ಮಪುರ ಪೊಲೀಸ್ ಠಾಣೆಯ ಪಕ್ಕದಲ್ಲಿರುವ ತೆಂಗಳಿ ಜ್ಯೂಯಲರ್ಸ್‌ನ ಕಾವಲುಗಾರನನ್ನು ಕೊಲೆ ಮಾಡಿ ಚಿನ್ನದ ಆಭರಣಗಳನ್ನು ದರೋಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ತೆಂಗಳಿ ಜ್ಯೂಯಲರ್ಸ್ ದರೋಡೆಯಾಗಿ ಒಂದು ವರ್ಷ ಕಳೆದು ಹೋದರೂ ಇಲ್ಲಿಯವರೆಗೆ ಆರೋಪಿಗಳನ್ನು ಪತ್ತೆ ಹಚ್ಚಲು ಪೊಲೀಸರಿಂದ ಏಕೆ ಸಾಧ್ಯವಾಗಿಲ್ಲ;

ಇ) ದರೋಡೆಕೋರರಿಂದ ಕೊಲೆಯಾದ ಕಾವಲುಗಾರ ರುಕುಮೋದ್ದಿನ್ ರವರ ಕುಟುಂಬಕ್ಕೆ ಸರ್ಕಾರವು ಇಲ್ಲಿಯವರೆಗೆ ಪರಿಹಾರ ಹಣವನ್ನು ಏಕೆ ನೀಡಿಲ್ಲ.

ಈ) ಪರಿಹಾರ ನೀಡಲು ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು.

ಉ) ಲಕ್ಷಾಂತರ ರೂಪಾಯಿಗಳ ಆಭರಣ ಕಳೆದುಕೊಂಡು ಕಂಗಾಲಾಗಿರುವ ತೆಂಗಳಿ ಜ್ಯೂಯಲರ್ಸ್‌ನ ಮಾಲೀಕರಿಗೆ ಸರ್ಕಾರದಿಂದ ಯಾವ ಪರಿಹಾರವನ್ನು ನೀಡಲಾಗಿದೆ.